ಮತ್ತು ಪಠ್ಯಪುಸ್ತಕಗಳು ಕೂಡ ಸರಿಯಾಗಿ ಒದಗಿಸತಕ್ಕಂಥಾದ್ದಕ್ಕೆ ಎಲ್ಲಾ ರೀತಿಯ ಕ್ರಮ ತೆಗೆದು ಕೊಂಡಿದ್ದೇವೆ. ಅದರಂತೆ ಕೆಲಸ ಆಗುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ಕೆ.ಎಸ್.ಇ.ಇ.ಬಿ. ಅವರು 91ರ ಜುಲೈರಂದು ನಡೆಸಿದ ಕನ್ನಡ ಹಿರಿಯ ಬೆರಳಚ್ಚು ಪರೀಕ್ಷೆ

3311- ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1991ನೆಯ ಜುಲೈ ತಿಂಗಳಲ್ಲಿ ನಡೆದ ವಾಣಿಜ್ಯ ಪರೀಕ್ಷೆಯ ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿರುತ್ತಾರೆ?

ಆ) ಇದರಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಕನ್ನಡ ಪ್ರೌಢ ದರ್ಜೆ ಪರೀಕ್ಷೆಯ ಮೊದಲನೆಯ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿರುತ್ತಾರೆ?

ಇ) ಕನ್ನಡ ಬೆರಳಚ್ಚು ಪ್ರೌಢದರ್ಜೆ ಮೊದಲನೆಯ ಪತ್ರಿಕೆಯಲ್ಲಿ ಬಹಳ ಮಂದಿ ವಿದ್ಯಾರ್ಥಿಗಳು ಮನಸೋ ಇಚ್ಛೆ ಮೌಲ್ಯ ಮಾಪನ ಮಾಡದಿರುವುದರಿಂದ ಅನುತ್ತೀರ್ಣರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಮರು ಎಣಿಕೆಗೆ ಕನ್ನಡ ಪ್ರೌಢ ದರ್ಜೆಯ ಎಷ್ಟು ವಿದ್ಯಾರ್ಥಿಗಳು ಅರ್ಜಿ ಹಾಕಿರುತ್ತಾರೆ?

ಉ) ಮೌಲ್ಯಮಾಪನ ಮನಸೋ ಇಚ್ಛೆ ಆಗಿರುವುದರಿಂದ ಸರ್ಕಾರವು ಮರು ಮೌಲ್ಯಮಾಪನ ಮಾಡಿ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡಲು ಕ್ರಮ ತೆಗೆದುಕೊಳ್ಳುವುದೇ?

ಊ) ಕನ್ನಡ ಬೆರಳಚ್ಚು ಪ್ರೌಢ ದರ್ಜೆ ಪರೀಕ್ಷೆಯಲ್ಲಿ ಹೆಚ್ಚು ವಿದ್ಯಾರ್ಥಿಗಳು ಮೆದಲನೆಯ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿರುವುದಕ್ಕೆ ಕಾರಣರಾದ ಮೌಲ್ಯಮಾಪಕರನ್ನು ಮೌಲ್ಯಮಾಪಕರ ಕೆಲಸದಿಂದ ವಜಾ ಮಾಡಲು ಸರ್ಕಾರ ಕ್ರಮ ತೆಗೆದು ಕೊಳ್ಳುವುದೆ?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು)

ಅ) 8613 ವಿದ್ಯಾರ್ಥಿಗಳು.

ಆ) 2,176.

ಇ) ಇಲ್ಲ.

ಈ) 61 ವಿದ್ಯಾರ್ಥಿಗಳು.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಸೀನಿಯರ್ ಕನ್ನಡ ಟೈಪರೇಟಿಂಗ್ ಪರೀಕ್ಷೆ ಜುಲೈ 1991ರಲ್ಲಿ ಆಯಿತು ಅದನ್ನು ಕೆ.ಎಸ್.ಎಸ್.ಇ.ಬಿ. ವತಿಯಿಂದ ನಡೆಸುತ್ತಾರೆ. ಇದರಲ್ಲಿ ನಾನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಚ್ಛಿಪಡುತ್ತೇನೆ ಅಲ್ಲಿ ವ್ಯಾಲುವೇಶನ್ ಮಾಡುವವರು ಯಾರು? ಯಾರನ್ನು ನೇಮಿಸುತ್ತಾರೆ. ಎರಡನೆಯದಾಗಿ ಸೀನಿಯರ್ ಗ್ರೇಡ್ ಕನ್ನಡ ಟೈಪರೇಟಿಂಗ್ ಪಾರ್ಟ್ 1ರಲ್ಲಿ ಮಾರ್ಕ್ಸ್ ಕೊಡುವಾಗ ಸರಿಯಾಗಿ ಮಾರ್ಕ್ಸ್ ಪರೀಕ್ಷೆಯಲ್ಲಿ ಕೊಟ್ಟಿಲ್ಲ ಎನ್ನುವ ದೂರು

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೆ, ಪರೀಕ್ಷೆಮೌಲ್ಯಮಾಪನ ನಿಬಂಧನೆಗಳಿಗೆ ಒಳಪಟ್ಟು ಅದರ ಮಾರ್ಗಸೂಚಿಯಲ್ಲಿ ಹೆಚ್ಚುವರಿ ತಿಳುವಳಿಕೆ ಕೊಟ್ಟು ಮುಖ್ಯಪರೀಕ್ಷಕರ ನಿರ್ದೇಶನದ ಅಡಿಯಲ್ಲಿ ನಡೆಸಲಾಗುತ್ತದೆ. ಮತ್ತು ಕನ್ನಡ ಸೀನಿಯರ್ ಇದರಲ್ಲಿ ಮಾರ್ಕ್ಸ್ ಬಹಳ ಕಡಿಮೆ ಕೊಟ್ಟಿದ್ದಾರೆ ಎನ್ನುವ ಸಂಶಯವನ್ನು ಏನು ವ್ಯಕ್ತಪಡಿಸಿದ್ದೀರಿ ಅದಕ್ಕೆ ಸರಿಯಾದಂಥ ಆಧಾರ ಇಲ್ಲ ಎನ್ನತಕ್ಕ ಮಾತನ್ನು ಈ ಅಂಕಿಅಂಶಗಳ ಮೂಲಕ ತಮಗೆ ತಿಳಿಸುತ್ತೇನೆ. 1989 ರಲ್ಲಿ 36 ಪರ್ಸೆಂಟ್ ಇದ್ದು ೯೦ರಲ್ಲಿ ೪೮ ಪರ್ಸೆಂಟ್ ತೇರ್ಗಡೆಯಾಗಿದ್ದರೆ ನವೆಂಬರ್‌ನಲ್ಲಿ ೪೧ ಪರ್ಸೆಂಟ್ ಆಗಿದ್ದಾರೆ. ಈಗಿನ ಜುಲೈನಲ್ಲಿ 50 ಪರ್ಸೆಂಟ್ ತೇರ್ಗಡೆಯಾಗಿದ್ದಾರೆ. ಆದ್ದರಿಂದ ಈ ಒಂದು ಸಂಶಯಕ್ಕೆ ಎಡೆ ಮಾಡಿ ಕೊಡತಕ್ಕಂಥ ಪರಿಸ್ಥಿತಿ ಇಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ನನ್ನ ಒಂದು ಮಾಹಿತಿ ಪ್ರಕಾರ ಟೈಪರೈಟಿಂಗ್‌ನಲ್ಲಿ ಅನುಭವ ಇರುವುದಿಲ್ಲವೆಂದು ನಾನು ಹೇಳುತ್ತಿಲ್ಲ, ಅವರು ಪರೀಕ್ಷೆಯಲ್ಲಿ ಪಾಸಾದ ನಂತರ ಅವರು ನಿಮ್ಮ ಸೆಕ್ರೆಟರಿಯೇಟ್‌ನಲ್ಲಿ ಸೆಕ್ಷನ್ ಆಫೀಸರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ತಾವು ಕಳುಹಿಸಿಕೊಡುತ್ತೀರಿ. ಹಾಗಾಗಿ ಇವತ್ತು ಸಾಕಷ್ಟು ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಆದ್ದರಿಂದ ನಾನೇನು ಸೂಚನೆ ಮಾಡುತ್ತೇನೆಂದರೆ ಈ ಕಾಮರ್ಸ್ ಇನ್‌ಸ್ಟಿಟ್ಯೂಟ್ ಪ್ರಿನ್ಸಿಪಾಲ್ ಮತ್ತು ಟೀಚರ್ಸ್ ಯಾರು ಕೆಲಸ ಮಾಡುತ್ತಿದ್ದಾರೆ ಅವರಿಗೆ ಹೆಚ್ಚು ಅನುಭವ ಇರುತ್ತದೆ ಅಂತಹವರನ್ನು ವ್ಯಾಲು ವೇಶನ್ ಜವಾಬ್ದಾರಿ ಕೊಟ್ಟರೆ ಸೂಕ್ತ ಆಗಬಹುದು ಎಂದು ಸಲಹೆ ಮಾಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಉತ್ತಮ ಸಲಹೆ ಪರಿಶೀಲನೆ ಮಾಡುತ್ತೇನೆ.

ಚಾಮರಾಜನಗರದಲ್ಲಿ ವಿದ್ಯುತ್ ಕೊರತೆ

3266 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ವಿದ್ಯುತ್ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಚಾಮರಾಜನಗರದಲ್ಲಿ ವಿದ್ಯುತ್ ಪೂರೈಕೆ ಸ್ಥಿತಿಯನ್ನು ಉತ್ತಮ ಪಡಿಸಲು ಸರ್ಕಾರದ ಯಾವ ಕಾರ್ಯಕ್ರಮವನ್ನು ರೂಪಿಸಿದೆ?

ಇ) ಚಾಮರಾಜನಗರ ಹಾಗೂ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ವಿದ್ಯುತ್ತಿನ ಲೋವೋಲ್ಟೇಜನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಚಾಮರಾಜನಗರದಲ್ಲಿ ಇತರೆ ಪಟ್ಟಣಗಳಲ್ಲಿರುವಂತೆ ಹಗಲು ಸಮಯದಲ್ಲಿ ವಿದ್ಯುತ್ ಒತ್ತಡದ ಕಾಲದಲ್ಲಿ ಲೋಡ್ ಷೆಡ್ಡಿಂಗ್ ಮಾಡಲಾಗುತ್ತಿದೆ.

ಆ) ಚಾಮರಾಜನಗರ ತಾಲ್ಲೂಕಿನಲ್ಲಿ ವಿದ್ಯುತ್ ಪೂರೈಕೆಯನ್ನು ಉತ್ತಮಪಡಿಸಲು ಹೂಟಗಳ್ಳಿಯಿಂದ ನಂಜನಗೂಡು ಮತ್ತು ಚಾಮರಾಜನಗರಕ್ಕೆ ಹೋಗುವ 66 ಕೆ. ವಿ. ವಿದ್ಯುತ್ ಮಾರ್ಗಗಳನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಆಯಾ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಆಗಲು ವ್ಯವಸ್ಥೆಗೊಳಿಸಲಾಗಿದೆ ಮತ್ತು ಇದಲ್ಲದೆ 12.5 ಎಂ. ವಿ. ಎ. ಸಾಮರ್ಥ್ಯದ ಒ. ಎಲ್. ಟಿ.ಸಿ. ವುಳ್ಳ ಟ್ರಾನ್ಸ್‌ಫಾರ್ಮರ್‌ನ್ನು